

# ಫ್ಯಾಬ್ಯುಲಸ್ ಫ್ಯಾಬ್ರಿಕ್

**ಬಟ್ಟೆಯಿಂದಲೂ ಅಂದದ ಒಡವೆ ತಯಾರಿಸಬಹುದು. ಕಿವಿಯೋಲೆ, ಬಳೆ, ಬ್ರೇಸ್ಲೆಟ್ ಮುಂತಾದವುಗಳನ್ನು ಬಟ್ಟೆ ಚೂರುಗಳಿಂದ ತಯಾರಿಸಿ ಉಡುಪಿಗೆ ತಕ್ಕಂತೆ ಮ್ಯಾಚಿಂಗ್ ಮಾಡಿಕೊಳ್ಳಬಹುದು. ಇದು ಈಗಿನ ಫ್ಯಾಷನ್ ಟ್ರೆಂಡ್ ಕೂಡ ಆಗಿದೆ.**

■ ಆಶಾ ಎಸ್. ಕುಲಕರ್ಣಿ

ಹೆಣ್ಣು ಎಷ್ಟೇ ಸೌಂದರ್ಯವತಿಯಾಗಿದ್ದರೂ ಅವಳ ಸೌಂದರ್ಯ ಎದ್ದು ಕಾಣಲು ತಕ್ಕಮಟ್ಟಿಗಿನ ಅಲಂಕಾರ ಮಾಡಿಕೊಳ್ಳುವುದು ಅವಶ್ಯಕ. ಮಹಿಳೆಯರ ಅಲಂಕಾರದಲ್ಲಿ ಕೃತಕ ಆಭರಣಗಳು ಕೂಡ ಒಂದು ಪ್ರಮುಖ ಪಾತ್ರ ವಹಿಸುತ್ತವೆ. ಅವು ಅಂದ ಹೆಚ್ಚಿಸುವುದರ ಜೊತೆಗೆ ಒಂದು ವಿಶಿಷ್ಟ ಲುಕ್ ನೀಡುತ್ತವೆ.

ಮಹಿಳೆಯರು ತಾವು ಧರಿಸುವ ಯಾವುದೇ ಒಡವೆಯಲ್ಲಿ ಒಂದು ವಿಶೇಷವಿರಬೇಕೆಂದು ಬಯಸುವುದು ಸಹಜ. ಫ್ಯಾಬ್ರಿಕ್ ಜ್ಯುವೆಲ್ಲರಿಗಳು ವಿಶಿಷ್ಟವಾಗಿದ್ದು ಇಂದಿನ ಫ್ಯಾಷನ್‌ಗೆ ತಕ್ಕಂತೆ ಟ್ರೆಂಡ್ ಸೃಷ್ಟಿಸಿದೆ. ಫ್ಯಾಬ್ರಿಕ್ ಎಂದ ತಕ್ಷಣ ಇದನ್ನು ಬರೀ ಉಡುಪುಗಳಿಗೆ ಮಾತ್ರ ಬಳಸಬಹುದು ಎನ್ನುವ ಕಾಲವೊಂದಿತ್ತು. ಆದರೆ ಈಗ ಫ್ಯಾಬ್ರಿಕ್‌ನಲ್ಲಿಯೂ ಸಾಕಷ್ಟು ವಿನ್ಯಾಸದ ಜ್ಯುವೆಲ್ಲರಿಗಳನ್ನು ತಯಾರಿಸಿ ಫ್ಯಾಷನ್ ಟ್ರೆಂಡ್ ಸೃಷ್ಟಿಸಬಹುದು ಎಂದು ವಿನ್ಯಾಸಕಾರರು ತೋರಿಸಿಕೊಟ್ಟಿದ್ದು, ಇದರಲ್ಲಿ ಯಶಸ್ಸನ್ನೂ ಕಂಡಿದ್ದಾರೆ.

ಫ್ಯಾಬ್ರಿಕ್ ಎಂದರೆ ಬಟ್ಟೆ. ಇದರಲ್ಲಿ ಕಾಟನ್, ಜೀನ್ಸ್, ನೈಲಾನ್, ಸಿಲ್ಕ್, ರೆಯಾನ್ ಹೀಗೆ ಸಾಕಷ್ಟು ವೆರೈಟಿಗಳಿವೆ. ಈ ತರಹದ ಬಟ್ಟೆಗಳಿಂದ ಪ್ಯಾಂಟ್, ಶರ್ಟ್, ಸ್ಕರ್ಟ್, ಮಿನಿ, ಮಿಡಿ, ಜಾಕೆಟ್, ಲಾಂಗ್ ಕುರ್ತಾ, ಶಾರ್ಟ್ ಕುರ್ತಿ, ಬರ್ಮುಡಾ ಹೀಗೆ ನಾನಾ ಬಗೆಯ ಮಾಡರ್ನ್ ಉಡುಪುಗಳನ್ನು ತಯಾರಿಸಿ ಧರಿಸಿರುವುದು ಸಾಮಾನ್ಯ. ಇದೀಗ ಈ ತರಹದ ಬಟ್ಟೆಗಳನ್ನು ಬರೀ ಡ್ರೆಸ್‌ಗಳನ್ನು ತಯಾರಿಸಲು ಮಾತ್ರವಲ್ಲ, ಮಹಿಳೆಯರ ಆಕ್ಸೆಸರೀಸ್‌ಗಳನ್ನು ತಯಾರಿಸಲು ಕೂಡ ಉಪಯೋಗಿಸಲಾಗುತ್ತಿದೆ. ಇದೀಗ ಈ ತರಹದ ಫ್ಯಾಬ್ರಿಕ್‌ನಲ್ಲಿಯೇ ಸಾಕಷ್ಟು ವೈವಿಧ್ಯದ ಒಡವೆಗಳನ್ನು ಮಾರುಕಟ್ಟೆಯಲ್ಲಿ ಕಾಣಬಹುದು. ಫ್ಯಾಷನ್ ಪ್ರಿಯರಾದ ಯುವತಿಯರು ಇದೀಗ ಈ ತರಹದ ಫ್ಯಾಬ್ರಿಕ್‌ನ ಜ್ಯುವೆಲ್ಲರಿಗಳಿಗೆ ಫಿದಾ ಆಗಿದ್ದಂತೂ ಸುಳ್ಳಲ್ಲ. ಮಾಡರ್ನ್ ಹಾಗೂ ಟ್ರೆಡಿಷನಲ್ ಡ್ರೆಸ್‌ಗಳಿಗೆ ಮ್ಯಾಚ್ ಆಗುವ ರೀತಿಯಲ್ಲಿ ದೊರೆಯುತ್ತಿರುವ ಈ ತರಹದ ಫ್ಯಾಬ್ರಿಕ್ ಜ್ಯುವೆಲ್ಲರಿಗಳು ಇದೀಗ ಎಲ್ಲರ ಹಾಟ್ ಫೇವರೆಟ್ ಆಗಿದೆ.

## ಜೀನ್ಸ್ ಬಟ್ಟೆಯಲ್ಲಿ ಇಯರ್ ರಿಂಗ್ಸ್

ಜೀನ್ಸ್ ಬಟ್ಟೆಯಲ್ಲಿ ತಯಾರಾಗುವ ಈ ಕಿವಿಯೋಲೆಗಳು ನೋಡಲು ಆಕರ್ಷಕವಾಗಿದ್ದು, ಇವುಗಳನ್ನು ವಿವಿಧ ಆಕಾರಗಳಲ್ಲಿ ತಯಾರಿಸಲಾಗುತ್ತಿದೆ. ದುಂಡನೆಯ ಆಕಾರ,